ಮತ್ತು ಮೈಸೂರು ಜಿಲ್ಲೆಗಳ ಜನ ಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಬಂಡೀಪುರದಲ್ಲಿ ಒಂದು ಸಭೆ ನಡೆಸಿ, ಸವಿವರವಾದ ಚರ್ಚೆ ನಡೆಸಲಾಯಿತು. ಸದರಿ ಸಭೆಯಲ್ಲಿ ಹೊರಹೊಮ್ಮಿದ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯ ಅಂತಿಮ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಳಿದಂತೆ, ಇತರೆ ರಾಷ್ಟ್ರೀಯ ಉದ್ಯಾನವನ/ವನ್ಯಧಾಮಗಳ ಸುತ್ತ ಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯಗಳೆಂದು ಘೋಷಿಸಲು ಸಹ ಇದೇ ರೀತಿ ಕ್ರಮ ಕೈಗೊಳ್ಳಲಾಗುವುದು.

ಆನೆ ತಡೆ ಕಂದಕ ನಿರ್ಮಾಣ

373 (203) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) :– ಅರಣ್ಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಬಂಡೀಪುರ ಹುಲಿಯೋಜನೆಯ ಅರಣ್ಯದ ಅಂಚಿನಲ್ಲಿ ಕಾಡಾನೆಗಳ ಹಾವಳಿ ತಪ್ಪಿಸಲು ಎಷ್ಟು ಕಿ.ಮೀ. ಆನೆ ತಡೆ ಕಂದ ಹಾಗೂ ಸೋಲಾರ್ ಬೇಲಿ ನಿರ್ಮಿಸಬೇಕಾಗಿದೆ ಹಾಗೂ ಈವರೆವಿಗೆ ಎಷ್ಟು ಕಿ.ಮೀ. ಆನೆ ತಡೆ ಕಂದಕ ಮತ್ತು ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿದೆ;

ಆ) ಹಾಗಿದ್ದಲ್ಲಿ, ಯಾವ ಯಾವ ವರ್ಷದಲ್ಲಿ ಎಷ್ಟು ಕಿ.ಮೀ. ಆನೆ ತಡೆ ಕಂದಕ ಮತ್ತು ಸೋಲಾರ್ ಬೇಲಿ ನಿರ್ಮಿಸಲಾಗಿದೆ. (ವಿವರ ನೀಡುವುದು);

ಇ) ಹಾಗಿದ್ದಲ್ಲಿ ಅದರ ನಿರ್ವಹಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು):–

ಅ) ಬಂಡೀಪುರ ಹುಲಿಯೋಜನೆ ವಿಭಾಗದಲ್ಲಿ ಕಾಡಾನೆ ಹಾವಳಿ ತಪ್ಪಿಸಲು ಈವರೆಗೆ 214 ಕಿ.ಮೀ. ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿದ್ದು, ಅದರಲ್ಲಿ ಹೊಸಪುರ, ಶ್ರೀಕಂಠಪುರ, ಕುರುಬರಹುಂಡಿ ವ್ಯಾಪ್ತಿಯಲ್ಲಿ 24 ಕಿ.ಮೀ. ಸೋಲಾರ್ ತಂತಿ ಬೇಲಿ ಕಾಮಗಾರಿ ಪ್ರಗತಿಯಲ್ಲಿದ್ದು, ಎನ್. ಬೇಗೂರು ವಲಯದ ಕೆಂಚನಹಳ್ಳಿ ಬಳಿ 01 ಕಿ.ಮೀ. ಮೊಳೆಯೂರು ವಲಯದ ಹುಸ್ಕೂರುಮಾಳ ಹಾಗೂ ಹರಿಯಾಲಪುರ ಮಧ್ಯೆ 02 ಕಿ.ಮೀ. ಸೋಲಾರ್ ತಂತಿ ಬೇಲಿ ನಿರ್ಮಾಣ ಕಾಮಗಾರಿಯು ಸ್ಥಳೀಯ ಕಾರಣಗಳಿಂದ

ಸ್ಥಗಿತಗೊಂಡಿದ್ದು ಉಳಿದಂತೆ ಈ ವಿಭಾಗದಲ್ಲಿ ಹೊಸದಾಗಿ ಸೋಲಾರ್ ತಂತಿ ಬೇಲಿ ನಿರ್ಮಿಸುವ ಅವಶ್ಯಕತೆ ಇರುವುದಿಲ್ಲ.

ಬಂಡೀಪುರ ಹುಲಿಯೋಜನೆ ವಿಭಾಗದ ಗಡಿಯಂಚಿನಲ್ಲಿ 172.50 ಕಿ.ಮೀ. ಆನೆ ತಡೆ ಕಂದಕ ನಿರ್ಮಿಸಲಾಗಿದ್ದು, ಉಳಿದಂತೆ ಮೊಳೆಯೂರು ವಲಯದ ವ್ಯಾಪ್ತಿಯಲ್ಲಿ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ನೀರಿರುವ ಕಾರಣ ಮತ್ತು ಜಿ.ಎಸ್. ಬೆಟ್ಟ ವಲಯದ ಶಿವಪುರ, ಹುಂಡೀಪುರ, ಕೆಬ್ಬೆಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಗುಡ್ಡಗಾಡು (ಕಲ್ಲುಬಂಡೆ) ಪ್ರದೇಶವಿರುವುದರಿಂದ ಹಾಗೂ ಓಂಕಾರ ವಲಯದ ಕುರುಬರಹುಂಡಿ, ಯಡವನಹಳ್ಳಿ, ಶ್ರೀಕಂಠಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಒತ್ತುವರಿ ಸಮಸ್ಯೆ ಮತ್ತು ಕಲ್ಲುಬಂಡೆ ಇರುವ ಕಾರಣಗಳಿಂದಾಗಿ ಆನೆ ತಡೆ ಕಂದಕಗಳನ್ನು ನಿರ್ಮಿಸಲು ಅವಕಾಶವಿರುವುದಿಲ್ಲ.

ಆ) ಬಂಡೀಪುರ ಹುಲಿಯೋಜನೆ ವಿಭಾಗದಲ್ಲಿ ಈ ಕೆಳಕಂಡಂತೆ ಆನೆ ತಡೆ ಕಂದಕ ಮತ್ತು ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿದೆ.

(ಕಿ.ಮೀ.)

	ಸೋಲಾರ್ ತಂತಿ ಬೇಲಿ	ಆನೆ ತಡೆ ಕಂದಕ
2007–08 ರ ಹಿಂದಕ್ಕೆ	–	139
2007–08	12	12
2008–09	00	00
2009–10	45.25	12.5
2010–11	92.70	5.00
2011–12	64.00	4.00
ಒಟ್ಟು	**214.00**	**172.5**

ಇ) ಸೋಲಾರ್ ತಂತಿ ಬೇಲಿ ನಿರ್ವಹಣೆಗಾಗಿ ಗಡಿಯುದ್ದಕ್ಕೂ ಸೋಲಾರ್ ತಂತಿ ಬೇಲಿ ನಿರ್ವಹಣಾ ರಸ್ತೆಯನ್ನು ನಿರ್ಮಿಸಿ, ಬ್ಯಾಟರಿ ಹಾಗೂ ಎನರ್ಜೈಸರ್‌ಗಳ ರಕ್ಷಣೆಗಾಗಿ ಸೋಲಾರ್ ಶೆಡ್‌ಗಳನ್ನು ನಿರ್ಮಾಣ ಮಾಡಿ ಸ್ಥಳೀಯರನ್ನು ನೇಮಿಸಿ ಕೊಂಡು ಸಂಬಂಧಪಟ್ಟ ಗುತ್ತಿಗೆದಾರರಿಂದ ಎರಡು ವರ್ಷಗಳವರಗೆ ನಿರ್ವಹಣೆ

ಮಾಡಲಾಗುತ್ತಿದೆ. ಗುತ್ತಿಗೆದಾರರಿಂದ ನಿರ್ವಹಣೆ ಅವಧಿ ಮುಗಿದಂತಹ ಸ್ಥಳಗಳಲ್ಲಿ ಇಲಾಖಾ ಮುಖಾಂತರ ನಿರ್ವಹಿಸಲಾಗುತ್ತಿದೆ.

ಆನೆ ತಡೆ ಕಂದಕಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹೂಳು ತುಂಬಿದ ಪ್ರದೇಶಗಳಲ್ಲಿ ಹೂಳೆತ್ತುವುದು. ಕಂದಕ ವಿಕಾರಗೊಂಡ ಸ್ಥಳಗಳಲ್ಲಿ (Shape out) ಸಿಮೆಂಟ್ ವಾಲ್, ನಿರ್ಮಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ. ಹಾಗೂ ಆನೆ ತಡೆ ಕಂದಕಗಳ ಮೂಲಕ ನೀರು ಹರಿದು ಹಳ್ಳಕೊಳ್ಳ ಬಿದ್ದಂತಹ ಸ್ಥಳಗಳಲ್ಲಿ ಚೆಕ್‌ಡ್ಯಾಂ ಮತ್ತು ಕಲ್ವರ್ಟ್‌ಗಳನ್ನು ನಿರ್ಮಿಸುವ ಮೂಲಕ ಆನೆ ತಡೆ ಕಂದಕಗಳನ್ನು ದುರಸ್ಥಿಗೊಳಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಬೇಗೂರು ಐಟಿಐ ಕಾಲೇಜು ಕಟ್ಟಡ

374 (204) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) :– ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಗ್ರಾಮದ ಸರ್ಕಾರಿ ಐಟಿಐ ಕಾಲೇಜಿನ ಕಟ್ಟಡ ನಿರ್ಮಾಣದ ವಿಸ್ತರಣೆ, ವಸತಿ ಗೃಹ ಹಾಗೂ ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಐಟಿಐ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು);

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಹೌದು

Yes

ಆ) 2008–09ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ಆಯವ್ಯಯ ಅನುಬಂಧ–ಈ ಯೋಜನೆಯಡಿ ಸದರಿ ಕೈಗಾರಿಕಾ ತರಬೇತಿ ಸಂಸ್ಥೆಯ ನಿರ್ಮಾಣಕ್ಕಾಗಿ ರೂ.150.00 ಲಕ್ಷಗಳ ಅನುದಾನ ಕಲ್ಪಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ–2ನೇ ಲೋಕೋಪಯೋಗಿ ಇಲಾಖೆ ಗುಂಡ್ಲುಪೇಟೆ ಇವರು ತಮ್ಮ ಪತ್ರ ದಿನಾಂಕ: 12–11–2010 ರಲ್ಲಿ ತಿಳಿಸಿರುತ್ತಾರೆ.